# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 300 |
| ಮಾನ್ಯ ಸದಸ್ಯರ ಹೆಸರು | ಶ್ರೀ ಸಿ.ಟಿ. ರವಿ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19/07/2024 |
| ಉತ್ತರಿಸುವ ಸಚಿವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನಿಧಿಯಲ್ಲಿ ಸಂಗ್ರಹವಾಗಿರುವ ಹಣ ಎಷ್ಟು: ಈ ನಿಧಿಯಲ್ಲಿರುವ ಹಣವನ್ನು ಯಾವ್ಯಾವ ಉದ್ದೇಶಕ್ಕೆ ಬಳಕೆ ಮಾಡಿಕೊಂಡು ಬರಲಾಗಿದೆ: | 2007 ರಿಂದ 30-06-2024 ರವರೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಸುಂಕ ನಿಧಿಯಲ್ಲಿ ರೂ. 15,468.65 ಕೋಟಿಗಳಷ್ಟು (ಸುಂಕ, ನೋಂದಣಿ/ ನವೀಕರಣ, ಬಡ್ಡಿ ಮತ್ತು ಇತರೆ ಸೇರಿದಂತೆ) ಹಣ ಸಂಗ್ರಹವಾಗಿರುತ್ತದೆ.<br>ಈ ಸುಂಕ ಮೊತ್ತವನ್ನು ಮಂಡಳಿಯು ನೋಂದಾಯಿತ ಫಲಾನುಭವಿಗಳಿಗಾಗಿ ರೂಪಿಸಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಅನುಷ್ಠಾನಕ್ಕಾಗಿ ಮತ್ತು ಕಛೇರಿಯ ಆಡಳಿತಾತ್ಮಕ ಖರ್ಚುಗಳಿಗಾಗಿ ಬಳಸಲಾಗುತ್ತಿದೆ. |
| ಆ) | ಕಳೆದ 03 ವರ್ಷದಿಂದ ಯಾವ ಉದ್ದೇಶಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗಿದೆ; (ವರ್ಷವಾರು ವಿವರ ನೀಡುವುದು); | ಮಂಡಳಿಯಲ್ಲಿ ಸಂಗ್ರಹವಾದ ಸುಂಕದ ಮೊತ್ತವನ್ನು ನೋಂದಾಯಿತ ಫಲಾನುಭವಿಗಳಿಗಾಗಿ ರೂಪಿಸಿರುವ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳ ಅನುಷ್ಠಾನಕ್ಕಾಗಿ ಮತ್ತು ಕಛೇರಿಯ ಆಡಳಿತಾತ್ಮಕ ಖರ್ಚುಗಳಿಗಾಗಿ ಬಳಸಿರುವ ಕಳೆದ 03 ವರ್ಷದ ವಿವರ ಈ ಕೆಳಕಂಡಂತಿದೆ. |

| ವರ್ಷ | ಕಲ್ಯಾಣ ಕಾರ್ಯಕ್ರಮಗಳಿಗಾಗಿ ವಿತರಿಸಿದ ಮೊತ್ತ (ರೂ.ಕೋಟಿಗಳಲ್ಲಿ) | ಆಡಳಿತಾತ್ಮಕ ವೆಚ್ಚಕ್ಕಾಗಿ ಭರಿಸಿದ ಮೊತ್ತ (ರೂ.ಕೋಟಿಗಳಲ್ಲಿ) |
|---|---|---|
| 2021–22 | 1997.43 | 56.73 |
| 2022–23 | 2076.39 | 33.49 |
| 2023–24 | 983.22 | 45.38 |

| | | |
|---|---|---|
| ಇ) | ಕಾರ್ಮಿಕರ ಮಕ್ಕಳಿಗೆ ವಿತರಿಸಲು ಮಂಡಳಿ ಎಷ್ಟು ಲ್ಯಾಪ್ ಟಾಪ್‌ಗಳನ್ನು ಖರೀದಿಸಿದೆ; ಪ್ರತೀ ಲ್ಯಾಪ್ ಟಾಪ್ ಖರೀದಿಗೆ ನೀಡಿರುವ ಹಣ ಎಷ್ಟು; ಲ್ಯಾಪ್‌ಟಾಪ್ ಖರೀದಿಯಲ್ಲಿ ಆಕ್ರಮಗಳು ನಡೆದಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ತನಿಖೆ ನಡೆಸಿದೆಯೇ; | ಮಂಡಳಿಯ ನೋಂದಾಯಿತ ಕಾರ್ಮಿಕರ ಅರ್ಹ ಮಕ್ಕಳಿಗೆ ವಿತರಿಸಲು ಒಟ್ಟು 7000 ಲ್ಯಾಪ್‌ಟಾಪ್‌ಗಳನ್ನು ಖರೀದಿಸಲಾಗಿರುತ್ತದೆ. ಪ್ರತಿ ಲ್ಯಾಪ್‌ಟಾಪ್ ಮತ್ತು ಇತರೆ ಪರಿಕರಗಳ ಖರೀದಿಗಾಗಿ ಒಟ್ಟು ರೂ.71,046/-ಗಳಷ್ಟು ಖರ್ಚಾಗಿರುತ್ತದೆ. ಮಂಡಳಿಯು ಕೆಟಿಪಿಪಿ ನಿಯಾಮಾವಳಿಗಳ ಅನುಸಾರ ಇ-ಟೆಂಡರ್ ಕರೆದು ಅರ್ಹ ಸಂಸ್ಥೆಯನ್ನು ಆಯ್ಕೆಮಾಡಿ ಲ್ಯಾಪ್‌ಟಾಪ್‌ಗಳನ್ನು ಖರೀದಿ ಮಾಡಲಾಗಿರುತ್ತದೆ. ಇದರಲ್ಲಿ ಯಾವುದೇ ಅಕ್ರಮಗಳು ನಡೆದಿರುವುದಿಲ್ಲ. |
| ಈ) | ರಾಜ್ಯ ಉಚ್ಛ ನ್ಯಾಯಾಲಯ ಮಂಡಳಿಯಲ್ಲಿರುವ ಹಣದ ಬಳಕೆ ಕುರಿತು ಬೇಸರ ವ್ಯಕ್ತಪಡಿಸಲು ಕಾರಣಗಳೇನು; ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ ಸಹಾಯ ಮಾಡಲು ನಿರಾಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಧನಸಹಾಯ ನಿರಾಕರಿಸಿರುವ ಅಧಿಕಾರಿಯ ವಿರುದ್ಧ ಸರ್ಕಾರ ಯಾವ ಕ್ರಮಕೈಗೊಂಡಿದೆ? | ಮಂಡಳಿಯು ದಿನಾಂಕ: 30-10-2023 ರಂದು ಶೈಕ್ಷಣಿಕ ಧನ ಸಹಾಯದ ದರಗಳನ್ನು ಪರಿಷ್ಕರಿಸಲಾಗಿದೆ. 2022-23 ನೇ ಸಾಲಿನಲ್ಲಿ ಶೈಕ್ಷಣಿಕ ಧನ ಸಹಾಯಕ್ಕಾಗಿ ರೂ. 400.00 ಕೋಟಿಗಳನ್ನು ಮೀಸಲಿಡಲಾಗಿರುತ್ತದೆ. ಆದರೆ, ಸದರಿ ವರ್ಷದಲ್ಲಿ 11.13 ಲಕ್ಷ ಅರ್ಜಿಗಳು ಸ್ವೀಕೃತವಾಗಿದ್ದು, ಇವುಗಳಲ್ಲಿ 9.61 ಲಕ್ಷ ಅರ್ಜಿಗಳು ಶೈಕ್ಷಣಿಕ ಧನ ಸಹಾಯಕ್ಕಾಗಿ ಅರ್ಹವಾಗಿದ್ದವು, ಆದುದರಿಂದ ಲಭ್ಯವಿರುವ ಅನುದಾನಕ್ಕೆ ಅನುಗುಣವಾಗಿ ಎಲ್ಲಾ ಅರ್ಜಿಗಳಿಗೂ ಶೈಕ್ಷಣಿಕ ಧನ ಸಹಾಯವನ್ನು ನೀಡಬೇಕೆನ್ನುವ ಉದ್ದೇಶದಿಂದ ಶೈಕ್ಷಣಿಕ ಧನ ಸಹಾಯದ ದರಗಳನ್ನು ಪರಿಷ್ಕರಿಸಲಾಗಿರುತ್ತದೆ.<br><br>ಆದರೆ, ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಇಬ್ಬರು ಫಲಾನುಭವಿಗಳು ಹಾಗೂ ಅವರ ಮಕ್ಕಳು ರಿಟ್ ಅರ್ಜಿ ಸಂಖ್ಯೆ. 9924/2024 ರಲ್ಲಿ ತಮಗೆ ಪರಿಷ್ಕರಣೆಯ ಪೂರ್ವದಲ್ಲಿದ್ದ ದರಗಳನ್ವಯವೇ ಶೈಕ್ಷಣಿಕ ಧನ ಸಹಾಯವನ್ನು ನೀಡಬೇಕೆಂದು ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ದಿನಾಂಕ: 23-04-2024 ರಂದು ಮಾನ್ಯ ನ್ಯಾಯಾಲಯವು ಮಧ್ಯಂತರ ಆದೇಶವನ್ನು ನೀಡಿ ದಿನಾಂಕ: 30-10-2023 ರ ಪೂರ್ವದಲ್ಲಿದ್ದ ದರಗಳನ್ವಯ ಶೈಕ್ಷಣಿಕ ಧನ ಸಹಾಯವನ್ನು ಪಾವತಿಸಲು ಆದೇಶಿಸಿದ್ದು, ಮಾನ್ಯ ನ್ಯಾಯಾಲಯದ ಆದೇಶದನ್ವಯ ಮೊತ್ತವನ್ನು ಉಭಯ ಅರ್ಜಿ ದಾರರಿಗೂ ಪಾವತಿಸಲಾಗಿರುತ್ತದೆ. |

| | | |
|---|---|---|
| | | ಮಂಡಳಿಯು ನೋಂದಾಯಿತ ಫಲಾನುಭವಿಗಳ ಮಕ್ಕಳಿಗೆ ಶೈಕ್ಷಣಿಕ ಸಹಾಯ ಧನ ನೀಡಲು ಮಂಡಳಿಯು ನಿರಾಕರಿಸಿರುವುದಿಲ್ಲ. ನಿರಂತರವಾಗಿ 2008-09 ರಿಂದಲೂ ಮಂಡಳಿಯು ಶೈಕ್ಷಣಿಕ ಧನ ಸಹಾಯವನ್ನು ಫಲಾನುಭವಿಗಳಿಗೆ ನೀಡುತ್ತಿದೆ.<br><br>2023-24 ನೇ ಸಾಲಿನಲ್ಲಿ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ನಲ್ಲಿ ಶೈಕ್ಷಣಿಕ ಸಹಾಯ ಧನಕ್ಕಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ಚಾಲ್ತಿಯಲ್ಲಿದ್ದು, ನಂತರ ಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ, ಅರ್ಹ ಅರ್ಜಿಗಳಿಗೆ ಶೈಕ್ಷಣಿಕ ಸಹಾಯ ಧನವನ್ನು ಬಿಡುಗಡೆ ಮಾಡಲಾಗುತ್ತದೆ. ಆದೇ ರೀತಿ ಈ ಸಾಲಿನಲ್ಲಿ ಅಂದರೆ (2024-25) ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ನಲ್ಲಿ ಎಲ್ಲಾ ಇಲಾಖೆಗಳ ಶೈಕ್ಷಣಿಕ ಧನ ಸಹಾಯಕ್ಕಾಗಿ ಅರ್ಜಿಯನ್ನು ಆಹ್ವಾನಿಸುವಾಗ ಮಂಡಳಿಯ ಶೈಕ್ಷಣಿಕ ಧನ ಸಹಾಯಕ್ಕಾಗಿ ಕೂಡ ಅರ್ಜಿಗಳನ್ನು ಆಹ್ವಾನಿಸಲಾಗುವುದು. |

**ಕಾಇ 205 ಎಲ್ ಇಟಿ 2024**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**